ಗೌರವಾರ್ಥ ಈ ದಿನ ಮಧ್ಯಾಹ್ನ 2.30ಕ್ಕೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿರುವ ಭೋಜನ ಕೂಟಕ್ಕೆ ತಮ್ಮೆಲ್ಲರನ್ನೂ ಆಹ್ವಾನಿಸಿರುತ್ತಾರೆ. ತಾವುಗಳು ದಯಮಾಡಿ ಭಾಗವಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 32 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು.)

ಸದನವು ಮಧ್ಯಾಹ್ನ 3.28 ಗಂಟೆಗೆ ಪ್ರಾರಂಭವಾಯಿತು.

(ಸಭಾಧ್ಯಕ್ಷರು

(ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

(1) **ವಿಷಯ:** ಮುಂಬೈನಲ್ಲಿ ಆಗಿರುವ ಬಾಂಬ್ ಸರಣಿ ಸ್ಫೋಟದಿಂದ ರಾಜ್ಯದಲ್ಲಿ ಕಟ್ಟೆಚ್ಚರ ವಹಿಸುವ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ನಾನು ಬೆಳಿಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆನು. ಕೇಂದ್ರ ಸರ್ಕಾರದ ಗೃಹ ಇಲಾಖೆಯಿಂದ ರಾಜ್ಯ ಸರ್ಕಾರಕ್ಕೆ ಒಂದು ಮಾಹಿತಿಯನ್ನು ಕಳುಹಿಸಿದ್ದಾರೆ. ಬಾಂಬೆಯಲ್ಲಿ ಬಾಂಬ್ ಬ್ಲಾಸ್ಟ್ ಆಗಿರುವ ಹಿನ್ನೆಲೆಯಲ್ಲಿ ಅಲ್ಲಿರುವ ಅಪರಾಧಿಗಳೆಲ್ಲರೂ ಬೆಂಗಳೂರು ಕಡೆಗೆ ಹೊರಟಿದ್ದಾರೆಂದು ಮಾಹಿತಿ ಬಂದಿದೆ. ಹೈದರಾಬಾದಿನ ಮುಖಾಂತರ ಗುಲ್ಬರ್ಗಾ, ಬೀದರ್ ಕಡೆಯಿಂದ ಬೆಂಗಳೂರಿಗೆ ನುಸುಳುವ ಅವಕಾಶವಿದೆಯೆಂದು ಕೇಂದ್ರ ಸರ್ಕಾರದ ಗೃಹ ಇಲಾಖೆಯಿಂದ ಮಾಹಿತಿಯು ಬಂದಿದೆ. ಇದರ ಬಗ್ಗೆ ಎರಡೂ ಮೂರು ಪತ್ರಿಕೆಗಳಲ್ಲಿ ಕೂಡ ಪ್ರಕಟವಾಗಿದೆ. ನಾನು ಯಾಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ, ಹಿಂದೆ ಐ.ಎಸ್.ಐ. ಮೇಲೆ ಧಾಳಿ ನಡೆದಂತಹ ಸಂದರ್ಭದಲ್ಲಿ ಮೂರು ದಿವಸಗಳ ಮೊದಲೇ ಕೇಂದ್ರ ಸರ್ಕಾರದ ಗೃಹ ಇಲಾಖೆಯಿಂದ ರಾಜ್ಯ ಸರ್ಕಾರಕ್ಕೆ ಮಾಹಿತಿ ಬಂದಿದ್ದರೂ ಸಹ ಏನೂ ಕ್ರಮ ತೆಗೆದುಕೊಂಡಿಲ್ಲ ಎನ್ನುವ ಟೀಕೆ ಬೇರೆ ಆಗ ಬಂದಿತ್ತು. ಈಗಲೂ ಕೂಡ ಅದೇ ರೀತಿಯಾದ ಮಾಹಿತಿ ರಾಜ್ಯ ಸರ್ಕಾರಕ್ಕೆ ಬಂದಿದೆ, ಅದರ ಬಗ್ಗೆ ಸರ್ಕಾರದ ಹತ್ತಿರ ಏನು ಮಾಹಿತಿ ಇದೆ? ಈ ಹಿನ್ನೆಲೆಯಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಕೇಂದ್ರ ಸರ್ಕಾರದ ಗೃಹ ಇಲಾಖೆಯೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದಾರೆಯೇ?

ಅಧ್ಯಕ್ಷರು : ಈಗ ಶ್ರೀರಾಮರೆಡ್ಡಿಯವರೇ, ಗೃಹ ಮಂತ್ರಿಗಳು ಇನ್ನೂ ಬಂದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಗೃಹ ಮಂತ್ರಿಗಳನ್ನು ಕರೆಸಿ ಸರ್...

ಅಧ್ಯಕ್ಷರು : ಗೃಹ ಮಂತ್ರಿಗಳು ಬಂದಿದ್ದಾರೆ, ನೀವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಬಹಳ ಗಂಭೀರವಾದ ವಿಚಾರ, ಬಾಂಬೆಯಲ್ಲಿ 200 ಜನ ಸತ್ತಿದ್ದಾರೆ. ಅದೇ ಉಗ್ರಗಾಮಿಗಳು ಬೆಂಗಳೂರಿಗೆ ಬರತಕ್ಕಂಥ ಅಪಾಯವಿದೆಯೆಂದು ಈ ಬಗ್ಗೆ ಕೇಂದ್ರ ಸರ್ಕಾರದ ಗೃಹ ಇಲಾಖೆ ರಾಜ್ಯ ಸರ್ಕಾರಕ್ಕೆ ಮಾಹಿತಿಯನ್ನು ಕೊಟ್ಟಿದೆಯೆಂದು ಪತ್ರಿಕೆಯಲ್ಲಿ ಇದೆ. ಅದೂ ಎರಡೂ ಮೂರು ಪತ್ರಿಕೆಯಲ್ಲಿ ಇದೆ. ಯಾವ ಯಾವ ಕಡೆಯಿಂದ ಬರುತ್ತಾರೆ ಎಂದು ಅದರಲ್ಲಿ ತಿಳಿಸಿದ್ದಾರೆ ಎನ್ನತಕ್ಕ ಸುದ್ದಿ ಇದೆ. ಹೈದರಾಬಾದ್ ಮುಖಾಂತರ ಬಂದು ಈ ಕಡೆಯೆಲ್ಲಾ ಬರುತ್ತಾರೆ ಬೀದರ್, ಬಿಜಾಪುರ, ಗುಲ್ಬರ್ಗಾದಿಂದ ಬೆಂಗಳೂರಿಗೆ ನುಸುಳುತ್ತಾರೆ. ಕೋಲಾರದ ಮೇಲೆ ಬರುತ್ತಾರೆ ಎಂದು ಹೇಳತಕ್ಕ ಸುದ್ದಿಯೆಲ್ಲಾ ಬಂದಿದೆ. ಆದ್ದರಿಂದ, ಹಿಂದೆ ಕೂಡ ಐ.ಎಸ್.ಐ. ಅಟ್ಯಾಕ್‌ನಲ್ಲಿ ಈ ರೀತಿ ಎಚ್ಚರಿಕೆಯನ್ನು ಕೊಟ್ಟಿದ್ದರು ಗೃಹ ಇಲಾಖೆಯವರು. ಸರ್ಕಾರ ಇದನ್ನು ಪರಿಗಣನೆ ಮಾಡಲಿಲ್ಲವೆನ್ನುವ ಆರೋಪ ಈಗಲೂ ಕೂಡ ಇದೆ. ಈಗ ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳತಕ್ಕಂಥಾದ್ದು, ಗೃಹ ಇಲಾಖೆಯಿಂದ ನಿಮಗೆ ಮಾಹಿತಿ ಬಂದಿದೆಯೇ ಅಥವಾ ನಿಮ್ಮದೇ ಆದಂಥ ಸ್ವತಂತ್ರ ಮಾಹಿತಿಯನ್ನು ಏನಾದರೂ ಪಡೆದಿದ್ದೀರಾ? ಬಾಂಬೆಯಲ್ಲಿ ನಡೆದಂಥ ಘಟನೆಗೆ ಕಾರಣಕರ್ತರಾದ ಉಗ್ರಗಾಮಿಗಳು ಬೆಂಗಳೂರಿಗೆ ನುಸುಳತಕ್ಕ ಅವಕಾಶ ಇದೆಯೆಂದು ಹೇಳತಕ್ಕ ಎಲ್ಲಾ ಸಾಧ್ಯತೆಗಳೂ ಇದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಂಡಿದೆ? ಸರ್ಕಾರ ಏನು ಚಿಂತನೆ ನಡೆಸಿದೆ? ಏಕೆಂದರೆ, ಬೆಂಗಳೂರು ಇವತ್ತು ಟಾರ್ಗೆಟ್ ಆಗಿದೆ. ಐ.ಟಿ.ಬಿ.ಟಿ. city ಎಂದು ಹೇಳಿ. ಇವತ್ತು ಬೆಂಗಳೂರು ಕೂಡ ಉಗ್ರಗಾಮಿಗಳಿಗೆ ಟಾರ್ಗೆಟ್ ಆಗಿದೆ. ಅದರ ಸೂಚನೆ ಐ.ಎಸ್.ಐ.ನಲ್ಲಿ ನಮಗೆ ಸಿಕ್ಕಿತ್ತು. ಆದರೂ ಕೂಡ ನಾವು ಎಚ್ಚರಿಕೆಯನ್ನು ವಹಿಸಲಿಲ್ಲ. ಆದ್ದರಿಂದ ಬಾಂಬೆಯಲ್ಲಿ ಆದಂಥ ದುರ್ಘಟನೆಗಳು ಬೆಂಗಳೂರಿನಲ್ಲಿ ಆಗದಂತೆ, ಮರುಕಳಿಸದಂತೆ ನೋಡಬೇಕಾದರೆ ಸರ್ಕಾರ ಕಟ್ಟೆಚ್ಚರಿಕೆಯನ್ನು ವಹಿಸಬೇಕಾಗುತ್ತೆ. ಕೇಂದ್ರ ಸರ್ಕಾರದ ಗೃಹ ಇಲಾಖೆಯಿಂದ ಸುದ್ದಿ ಬಂದಿದೆಯೆಂದು ಮಾಹಿತಿ ಇದೆ ಇವತ್ತು ಪತ್ರಿಕೆಯಲ್ಲಿ. ಅದೇನು ಬಂದಿದೆಯೆಂದು ದಯವಿಟ್ಟು ಗೃಹಮಮತ್ರಿಗಳು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಬಹಳ ಗಂಭೀರವಾದಂಥ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ಈಗ ಬಾಂಬೆಯಲ್ಲಿ ಬಾಂಬ್ ಸರಣಿ ಸ್ಫೋಟವಾದ ನಂತರ ಬೆಂಗಳೂರು ಅವರ ಕೇಂದ್ರ ಎನ್ನುವ ಗುಮಾನಿ ಮತ್ತು ಸುದ್ದಿಗಳು ಅನೇಕ ಪತ್ರಿಕೆಗಳಲ್ಲಿ ಬಂದಿದೆ. ಜೊತೆಗೆ, ಈಗಾಗಲೇ ಸರ್ಕಾರದವರು ಬೆಂಗಳೂರು ಭದ್ರತೆ, ಕರ್ನಾಟಕದ ಭದ್ರತೆ, ಕರ್ನಾಟಕದ ಗಡಿ ಎಲ್ಲಾ ಭಾಗಗಳ ಬಗ್ಗೆ ಭದ್ರತೆ ಬಗ್ಗೆ ಸರ್ಕಾರ ತೆಗೆದುಕೊಂಡಿರತಕ್ಕ ಕಾರ್ಯಕ್ರಮಗಳೇನು? ನೀವು ಯಾವ ಯಾವ ರೀತಿಯ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೀರಿ? ಅನೇಕ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಹಿಂದೆ ಆದಂಥ ಅನೇಕ ದುರಂತಗಳು, ಅದು ಯಾವುದೇ ದುರಂತಗಳ ಬಗ್ಗೆ ಇವತ್ತಿನವರೆಗೂ ನಡೆದಿರುವ ಬಗ್ಗೆ, ಪತ್ತೆಯಾಗಿರುವ ಬಗ್ಗೆ ನಮಗೆ ಯಾವುದೇ ಮಾಹಿತಿ ದೊರೆತಿಲ್ಲ. ಆದರೆ, ನನಗನ್ನಿಸುತ್ತದೆ ಇವತ್ತು ಬೆಂಗಳೂರು ಬೃಹದಾಕಾರವಾಗಿ ಬೆಳೆಯುತ್ತಾ ಇದೆ. ಸುಮಾರು 75 ಲಕ್ಷ ಜನ ಬೆಂಗಳೂರಿನಲ್ಲಿದ್ದಾರೆ. ಮತ್ತೆ ಬೆಂಗಳೂರು ಸುತ್ತ ಇರತಕ್ಕ ಸಣ್ಣ ಸಣ್ಣ ತಾಲ್ಲೂಕುಗಳೂ ಸೇರಿದರೆ ಎರಡು ಕೋಟಿ ಜನ ಆಗುತ್ತಾರೆ. ಇವೂ ಕೂಡ ಇನ್ನೆರಡು ವರ್ಷಗಳಲ್ಲಿ ಸೇರುತ್ತವೆ. ಬೆಂಗಳೂರಿಗೆ ಯಾರು ಬರುತ್ತಾ ಇದ್ದಾರೆ, ಯಾರು ವಾಸ ಮಾಡುತ್ತಾ ಇದ್ದಾರೆ, ಯಾವ ಯಾವ ಪ್ರದೇಶದಲ್ಲಿ ಇದ್ದಾರೆ? ತಮಗೆ ಗೊತ್ತಿರುವಹಾಗೆ, ಹಿಂದೆ ಒಂದು ಸಾರಿ ನಾನು ಹೇಳಿದ್ದೆ. ಶಿವರಾಸನ್ ಬಂದು ಎರಡು ತಿಂಗಳು ಇದ್ದರೂ ಬೆಂಗಳೂರು ಪೋಲೀಸರಿಗೆ ಗೊತ್ತಾಗಲಿಲ್ಲ. ಆಮೇಲೆ ಯಾವುದೋ ಹಳ್ಳಿಯಲ್ಲಿ ಗೊತ್ತಾದ ಸುದ್ದಿ ಮೇಲೆ ಹಿಡಿದಿದ್ದಾಯಿತು. ಅಲ್ಲಿ ಡೈರಿ ಸಿಕ್ಕಿತು ಎಂದು, ಆ ಮೂಲಕ ಹಿಡಿದಿದ್ದಾಯಿತು. ಅವನು ಕೋಣನಕುಂಟೆಯಲ್ಲಿ ಇದ್ದಾನೆ ಎಂದು ತಿಳಿದು, ಹಿಡಿಯಲಾಯಿತು. ಅಲ್ಲಿಯವರೆಗೆ ಗೊತ್ತಿರಲಿಲ್ಲ. ಬೆಂಗಳೂರು ಬಹಳ ಗಂಭೀರವಾಗಿರತಕ್ಕಂಥ ಪಟ್ಟಣ. ಇದರ ಜೊತೆಗೆ ನಮ್ಮ ಜಲಾಶಯಗಳು, ರೈಲ್ವೆ ನಿಲ್ದಾಣಗಳು, ದೊಡ್ಡ ದೊಡ್ಡ ದೇವಸ್ಥಾನಗಳು ಈ ತರಹ ಅನೇಕ ವಿಚಾರಗಳು. ಅದರ ಬಗ್ಗೆ ಸರ್ಕಾರ ಎಷ್ಟು ಪರಿಣಾಮಕಾರಿಯಾಗಿ ಕ್ರಮ ಕೈಗೊಂಡಿದ್ದಾರೆಂಬುದು ಒಂದು. ಪೋಲೀಸ್ ಶಕ್ತಿಯನ್ನು ಹೆಚ್ಚಿಸುವುದಕ್ಕೆ ಹೊಸ ಶಸ್ತ್ರಾಸ್ತ್ರಗಳನ್ನು ಕೊಡುವುದಕ್ಕೆ ಏನೇನು ಮಾಡಿದ್ದಾರೆ ಎನ್ನತಕ್ಕಂಥಾದ್ದು. ಹಿಂದೆ ಅನೇಕ ಸಾರಿ ಪಾವಗಡದಲ್ಲಿ ನಡೆದಂಥಾದ್ದು, ಬೇರೆ ಬೇರೆ ಕಡೆ ನಡೆದಂಥ ಎಲ್ಲಾ ವಿಚಾರಗಳಲ್ಲೂ ಎಲ್ಲೋ ಒಂದು ಕಡೆ ನಾವು ಕಣ್ಣುಮುಚ್ಚಿ ಕುಳಿತಿದ್ದೇವೆ. ಇಂತಹ ಸಂದರ್ಭ ಬಂದಾಗ ಪೋಲೀಸ್ ಭದ್ರತೆ ಹಾಕುತ್ತೇವೆ. ಇಂದು ನಾವೆಲ್ಲಾ ಬರುವಾಗ, ಸುತ್ತಮುತ್ತ ಪೋಲೀಸಿನವರು ತಡೆದು, ತಡೆದು ಬಿಡುತ್ತಿದ್ದರು. ಈ ರೀತಿ ಇವತ್ತು, ನಾಳೆ ತಡೆದರೆ, ನಾಡಿದ್ದು ಯಥಾಸ್ಥಿತಿ. ಇನ್ನೊಂದು ಸಾರಿ ಬಾಂಬೆ ಬಿದ್ದಾಗ, ಮತ್ತೆ

ಪೋಲೀಸಿನವರು. ಇದು ಆಗಬಾರದು. ರಾಜ್ಯ ಸರ್ಕಾರ ಈ ಬಗ್ಗೆ ಪರಿಣಾಮಕಾರಿಯಾಗಿ ಏನು ಕ್ರಮ ಕೈಗೊಂಡಿದೆ ಎಂಬುದನ್ನು ಹೇಳಬೇಕು.

ಶ್ರೀ ಆರ್. ಧ್ರುವನಾರಾಯಣ : ಮಾನ್ಯ ಅಧ್ಯಕ್ಷರೇ, ಬಾಂಬೆಯಲ್ಲಿ ಬಾಂಬ್ ಸ್ಫೋಟವಾಯಿತು ಎಂದು ನಮ್ಮಲ್ಲಿ ಮಾಡುವ ಭದ್ರತೆ, ಒಂದು ವಾರಕ್ಕೆ ಸೀಮಿತವಾಗಬಾರದು. ಬಾಂಬೆಯಲ್ಲಿ ಸ್ಫೋಟ ಆಯಿತು ಎಂದು ನಮ್ಮ ರಾಜ್ಯದಲ್ಲಿ ಎಚ್ಚರಿಗೆ ವಹಿಸತಕ್ಕಂಥಾದ್ದು ಆಗಬಾರದು. ಯಾವಾಗಲೂ ಕೂಡ ಪೋಲೀಸ್ ಭದ್ರತೆ ಅಲರ್ಟ್ ಆಗಿರಬೇಕು. ಇಂತಹ ಸಂದರ್ಭಗಳಲ್ಲಿ ಮಾತ್ರ ಎಲ್ಲಾ ಕಡೆ ಪೋಲೀಸ್ ಹಾಕಿ ಬಂದೋಬಸ್ತ್ ಮಾಡುತ್ತಾರೆ. ಆಮೇಲೆ ಫ್ರೀ ಬಿಟ್ಟುಬಿಡುತ್ತಾರೆ. ಆದಾಗಬಾರದು. ಯಾವಾಗಲೂ ಕೂಡ ಹೈ ಅಲರ್ಟ್ ಇರಬೇಕು. ಬೆಂಗಳೂರು ಹಾಗೂ ಸುತ್ತಮುತ್ತಲಿನ ಎಲ್ಲಾ ಭಾಗದಲ್ಲೂ ಕೂಡ, ಪಟ್ಟಣ ಪ್ರದೇಶದಲ್ಲಿ ಎಲ್ಲಾ ಭಾಗದಲ್ಲೂ ಕೂಡ ಅಲರ್ಟ್ ಇರಬೇಕು. ಏಕೆಂದರೆ, ಈ ಸಮಾಜಘಾತುಕರು ಯಾವ ಟೈಮಿನಲ್ಲಿ ಯಾವ ಫಳಿಗೆಯಲ್ಲಿ ಏನು ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಆ ನಿಟ್ಟಿನಲ್ಲಿ ಇವತ್ತು ಬಾಂಬೆಯಲ್ಲಿ ಆಯಿತು, ಇದರಿಂದ ಬೆಂಗಳೂರು ಸುತ್ತಮುತ್ತ ಫುಲ್ ಪೋಲೀಸ್ ಹಾಕಿಕೊಂಡು ಭದ್ರತೆ ಕಾಪಾಡಬಹುದು. ಅವರು ಈ ಸಮಯದಲ್ಲಿ ಬರುವುದೇ ಇಲ್ಲ. ಫ್ರೀ ಬಿಟ್ಟಾಗ ಬಂದು ಬಾಂಬ್ ಹಾಕುತ್ತಾರೆ. ಅಂತಾದ್ದರಲ್ಲಿ ಯಾವಾಗಲೂ ಹೈ ಅಲರ್ಟ್ ಆಗಿರಬೇಕೆಂದು ಹೇಳಿ, ನಾನು ಒತ್ತಾಯ ಮಾಡುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು : ಅಧ್ಯಕ್ಷರೇ, ಒಂದು ಸಲಹೆ ಕೊಡಲಿಕ್ಕೆ ಬಯಸುತ್ತೇನೆ. ನಮ್ಮ ಈ ವಿಧಾನ ಸೌಧ ಮೇಲೆ ಮತ್ತೊಂದು ಕಣ್ಣಿದೆ. ಜೊತೆಯಲ್ಲಿ, ಎಲ್ಲಿ ಪ್ರಮುಖರು ಓಡಾಡುತ್ತಾರೆ, ಅಲ್ಲೆಲ್ಲಾ ಕಣ್ಣಿದೆ. ವಿಧಾನ ಸೌಧದಲ್ಲಿ ನಾನು ಇತ್ತೀಚೆಗೆ ಪ್ರದಕ್ಷಿಣೆ ಮಾಡಿ ನೋಡಿದಾಗ ಸಿ.ಸಿ.ಡಿ. ಕ್ಯಾಮರಾ ಕೆಲಸ ಮಾಡುತ್ತಾ ಇಲ್ಲ. ಶಾಸಕರ ಭವನ ಮತ್ತು ಇಲ್ಲಿರತಕ್ಕ ಎಲ್ಲಾ ಕ್ಯಾಮರಾಗಳೂ ಡೆಡ್ ಆಗಿ ಕುಳಿತಿವೆ. ಯಾರಿಗೆ ನಿರ್ವಹಣೆಗೆ ಕೊಟ್ಟಿದ್ದಾರೋ, ಅವರು ಮಾಡುತ್ತಾ ಇಲ್ಲ. ಇದರ ಬಗ್ಗೆ ದಯವಿಟ್ಟು ಕೂಡಲೇ ಗಮನಹರಿಸಬೇಕು. ಎರಡನೆಯದು, ನಮ್ಮಲ್ಲಿ ಸ್ಕ್ಯಾನರ್ ಎಂದು ಲಕ್ಷಾಂತರ ರೂಪಾಯಿ ಕೊಟ್ಟು, ರಾಜ್ಯಪಾಲರ ಮನೆಯ ಕಡೆಗೆ ಇದೆ. ಅದು ಅವತ್ತಿನದಿವಸದಿಂದಲೂ ಕೆಲಸ ಮಾಡುತ್ತಿಲ್ಲವಂತೆ. ಅದನ್ನು ತೆಗೆದುಕೊಂಡ ದಿವಸದಿಂದಲೂ ಕೆಲಸ ಮಾಡುತ್ತಿಲ್ಲ. ದಯವಿಟ್ಟು, ಅದನ್ನು ಕೂಡಲೇ ದುರಸ್ಥಿ ಮಾಡಿಸಬೇಕು. ಮತ್ತೆ ರಾಜ್ಯದಲ್ಲಿ ಬೇರೆ ಬೇರೆ ದೇಶಗಳಲ್ಲಿ ಹೇಗೆ ಸಿಟಿಜನ್ ಕಾರ್ಡ್ ತರಹ ಇರುತ್ತದೋ ಹಾಗೆ ಬೆಂಗಳೂರು ನಗರದಲ್ಲಿ ಸನ್ಮಾನ್ಯ ವಾಟಾಳ್ ನಾಗರಾಜರವರು ಹೇಳಿದಹಾಗೆ ಕೋಟ್ಯಾಂತರ ಜನ ಮುಂದೆ ವಲಸೆ

ಬರತಕ್ಕ ಎಲ್ಲಾ ಲಕ್ಷಣಗಳೂ ಇವೆ. ಅದರಿಂದ, ಸಿಟಿಜನ್ ಕಾರ್ಡ್ ಕಡ್ಡಾಯವಾಗಿ ಯಾರು ಬಂದು ನೆಲೆಸುತ್ತಾರೋ ಆ ವ್ಯಾಪ್ತಿಯಲ್ಲಿ, ಅಪಾರ್ಟ್‌ಮೆಂಟ್‌ಗಳಲ್ಲಿ ಯಾರು ಬಂದು ನೆಲೆಸುತ್ತಾರೋ ಒಂದೂ ಗೊತ್ತಾಗುವುದಿಲ್ಲ. ಹಳ್ಳಿಯಲ್ಲಿ ಅಥವಾ ಯಾವುದೋ ಒಂದು ಊರಿನಿಂದ ಒಬ್ಬರು ಹೊಸಬರು ಬಂದರೆ ಗೊತ್ತಾಗುತ್ತೆ. ಈ ನಗರ ಪ್ರದೇಶಗಳಲ್ಲಿ ಬಹಳ ಕಷ್ಟ ಸ್ವಾಮಿ. ಬಹುಶಃ ಗೃಹ ಇಲಾಖೆ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ಮತ್ತೆ ಇಂಟೆಲಿಜೆನ್ಸ್‌ಗೆ ಸ್ಪೆಷಲ್ ರೆಕ್ರೂಟ್‌ಮೆಂಟ್ ಆಗಬೇಕು. ಸುಮ್ಮನೆ ಯಾರನ್ನೋ ಪನಿಷಮೆಂಟ್ ಅಂತ, ಇಲ್ಲಿಗೆ ಹಾಕತಕ್ಕಂಥಾದ್ದು ಅಲ್ಲ. ಅದಕ್ಕೆ ರೆಕ್ರೂಟ್‌ಮೆಂಟ್ ಮಾಡುವಾಗಲೇ ಸ್ಪೆಷಲ ತರಬೇತಿ ಪಡೆದವರನ್ನೇ ಮುಂದಿನ ದಿನಗಳಲ್ಲಿ ರೆಕ್ರೂಟ್‌ಮೆಂಟ್ ಮಾಡಿಕೊಳ್ಳತಕ್ಕ ವ್ಯವಸ್ಥೆ ಬರಬೇಕೆಂದು ಈ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಸಿ.ಟಿ. ರವಿ : ಅಂಜುಮನ್ ಸಿದ್ದಕಿ ಹೆಸರಿನಲ್ಲಿ ಚರ್ಚ್ ಸ್ಫೋಟ ನಡೆಸಿದ ಘಟನೆ ನಮ್ಮ ಕಣ್ಣಿದುರಿಗೇ ಇದೆ. ಮೊನ್ನೆ ಮೊನ್ನೆ ಗುಲ್ಬರ್ಗಾದಲ್ಲಿ ನಕ್ಸಲೈಟ್ ಭಯೋತ್ಪಾದಕ ಸಿಕ್ಕಿಬಿದ್ದಿದ್ದು ಕೂಡ ನಮಗೆ, ಕರ್ನಾಟಕದ ಜೊತೆಗೆ ಸಂಬಂಧ ಇರುವುದನ್ನು ದೃಢಪಡಿಸಿದೆ. ಆಮೇಲೆ, ವಿಜ್ಞಾನ ಮಂದಿರದ ಮೇಲಿನ ಧಾಳಿ. ಇವೆಲ್ಲವನ್ನೂ ಆದರಿಸಿ, ನಾವೇನು ಇವತ್ತು ಕರ್ನಾಟಕ ಸುರಕ್ಷಿತವಾಗಿದೆ ಎಂದು ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳತಕ್ಕ ಸ್ಥಿತಿ ಇಲ್ಲ. ಅವರ ಜಾಲ ಎಲ್ಲಾ ಕಡೆ ಹರಡಿದೆ. ಅದು ಭಟ್ಕಳ ಇರಬಹುದು, ದಕ್ಷಿಣ ಕನ್ನಡ ಇರಬಹುದು, ಚಿಕ್ಕಮಗಳೂರಿನ ಮೂಡಿಗೆರೆ ಹತ್ತಿರ ಒಂದು ಚೆನ್ನಾಪುರ ಎನ್ನತಕ್ಕ ಒಂದು ಹಳ್ಳಿಯಲ್ಲಿ ಗುಲ್ಬರ್ಗಾದಲ್ಲಿಸಿಕ್ಕಿದಂಥ ಉಗ್ರಗಾಮಿ 20 ದಿವಸ ಕ್ಯಾಂಪ್ ಹಾಕಿದ್ದ ಎಂದರೆ, ಅವರು ಹಳ್ಳಿಯ ಬೇರು ಮಟ್ಟದಲ್ಲೂ ಕೂಡ ತಮ್ಮ ಜಾಲವನ್ನು ವಿಸ್ತರಿಸಿಕೊಂಡಿದ್ದಾರೆ ಎನ್ನುವುದಕ್ಕೆ ಇವೆಲ್ಲಾ ಸಣ್ಣ ಸಣ್ಣ ಎಚ್ಚರಿಕೆಯ ಕರೆ ಗಂಟೆಗಳಾಗಿವೆ. ಹಾಗಾಗಿ ಗೃಹ ಇಲಾಖೆ ಇವೆಲ್ಲವನ್ನೂ ಆದರಿಸಿ ರಾಜ್ಯವನ್ನು ಸುರಕ್ಷಿತವಾಗಿ ಉಳಿಸಲಿಕ್ಕೆ ಬೇಕಾದಂಥ ಎಲ್ಲಾ ರೀತಿಯ ಕ್ರಮ ಕೈಗೊಳ್ಳಬೇಕು. ಬೇಹುಗಾರಿಕೆ ಇಲಾಖೆಯನ್ನು ಬಲಪಡಿಸಿ, ಅಪರಿಚಿತರ ಚಲನ ವಲನಗಳನ್ನು ಗುರುತಿಸತಕ್ಕ ಕಾರ್ಯವನ್ನು ಮಾಡಬೇಕಾಗುತ್ತೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಿಮಾಮ್ ಅಲಿ ಎನ್ನತಕ್ಕ ಒಬ್ಬ ಉಗ್ರಗಾಮಿ ನಾಲ್ಕು ಜನ ಸಹಚರರ ಜೊತೆಯಲ್ಲಿ ಬೆಂಗಳೂರಿನಲ್ಲಿ ಹತ್ಯೆಯಾದ. ಹತ್ಯೆ ಮಾಡಿದ್ದು, ತಮಿಳುನಾಡಿನ ಪೋಲೀಸರು. ಅವನು ಕೊಯ ಮತ್ತೂರು ಬಾಂಬ್ ಸ್ಫೋಟಕ್ಕೆ ಸಂಬಂಧಪಟ್ಟಂಥ ಪ್ರಮುಖ ಆರೋಪಿ. ಅವನು ಇಲ್ಲಿ ವಾಸ ಮಾಡುತ್ತಿದ್ದಾನೆ ಎನ್ನತಕ್ಕಂಥಾದ್ದು ನಮ್ಮ ರಾಜ್ಯದ ಪೋಲೀಸರಿಗೆ ಮಾಹಿತಿಯೇ ಇರಲಿಲ್ಲ. ಅವರು

ಮಾಹಿತಿ ಕೊಟ್ಟು ಧಾಳಿ ಮಾಡಿದ ನಂತರವೇ, ಆತ ಇಲ್ಲಿ ವಾಸ ಮಾಡುತ್ತಿದ್ದಾನೆ ಎನ್ನುವುದು ಸಿಕ್ಕಿತು. ಹಾಗಾಗಿ, ನಮ್ಮ ರಾಜ್ಯ ಉಗ್ರಗಾಮಿಗಳ ಸುರಕ್ಷಿತ ತಾಣ ಆಗಬಾರದು. ವಿಧ್ವಂಸಕ ಕೃತ್ಯ ಎಸಗುವುದಕ್ಕೆ ಅವಕಾಶ ಆಗಬಾರದು. ಅದಕ್ಕೆ ಬೇಕಾದಂಥ ಎಲ್ಲಾ ರೀತಿಯ ಪೂರ್ವ ಸೂಚನೆಯನ್ನು ಪೂರ್ವ ಯೋಜಿತ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ಅಧ್ಯಕ್ಷರೇ, ಡೆಪ್ಯೂಟಿ ಸಿ.ಎಂ.ವರೆಗೂ ನೋಟೀಸ್ ತೆಗೆದುಕೊಂಡು ಬರುತ್ತೇವೆ. ಮಾಡರನ್ ಟೆಕ್ನಾಲಜಿ ಬಗ್ಗೆ ಮಾತನಾಡುತ್ತೇವೆ. ಮಾಡರನ್ ಎಕ್ವಿಪ್‌ಮೆಂಟ್ಸೇ ಇಲ್ಲ. ಒಬ್ಬೊಬ್ಬ ಪೋಲೀಸ್ ಆಫೀಸರುಗಳನ್ನು ನೋಡಿದರೆ, ಟಿಪ್ಪುಸುಲ್ತಾನ್ ಕಾಲದ ಗನ್ನುಗಳು, ಪಿಸ್ತೂಲುಗಳನ್ನು ಇಟ್ಟುಕೊಂಡಿದ್ದಾರೆ. ಅವರು ಟ್ರೈನಿಂಗ್‌ಗೇ ಹೋಗುವುದಿಲ್ಲ. ಗನ್ ಷೂಟಿಂಗ್‌ಗೆ bullets shortage ಏನೋ ವರ್ಷಕ್ಕೊಂದುಸಲ train ಮಾಡುತ್ತಾರೆ. ಇವರು ಹೇಗೆ ಷೂಟ್ ಮಾಡುವುದು. ಹೇಗೆ ಕ್ಯಾಚ್ ಮಾಡುವುದು? ಮಾಡರನ್ ಎಕ್ವಿಪ್‌ಮೆಂಟ್ಸ್ ಇರಬೇಕು. ಯಾವುದೋ ಒಂದು ನೂರು ವರ್ಷದ ಹಿಂದೆ ಬ್ರಿಟೀಷರು ಬಿಟ್ಟುಹೋಗಿದ್ದಾರೆ, ಆ ಎಕ್ವಿಪ್‌ಮೆಂಟ್ಸ್ ಇಟ್ಟುಕೊಂಡಿದ್ದಾರೆ. You just bring in modern technology. ನೀವೇ ನೋಡಿ. ಆ ಎಕ್ವಿಪ್‌ಮೆಂಟ್ಸನ್ನು ನೋಡಿದರೆ All the rogue fellows are having modern equipments. They are using that. Therefore, you just release more amount to the Police Department; let them bring in modern equipments and vehicles ಫೋನ್ ಮಾಡಿ, ಒಂದು ಸ್ಟೇಷನ್‌ನಿಂದ ಇನ್ನೊಂದು ಸ್ಟೇಷನ್‌ಗೆ ಹೋಗಬೇಕೆಂದರೆ, ಅರ್ಧ ದಿವಸ ಆಗುತ್ತದೆ. ಇವನು ಎಲ್ಲಿ ಹೋಗಿ ಹಿಡಿದುಕೊಳ್ಳುವುದಕ್ಕಗುತ್ತದೆ? ಆಮೇಲೆ ಈ ತರಹ ಆಗಿದೆ, ಹಾಗಾಗಿದೆ, ಹೀಗಾಗಿದೆ, ಸುಮ್ಮನೆ ಪ್ರೆಸ್‌ನಲ್ಲಿ ಬರುವುದು, ಪತ್ರಿಕೆಯಲ್ಲಿ ಬರುವುದನ್ನುನೋಡಿಕೊಂಡು, ಏನು ಮಾಡಿದಿರಿ, ಏನು ಮಾಡಿದಿರಿ ಎಂದು ಹೇಳುವುದು. Try to just use modern equipment and modern vehicles and Communication is also very important. ಯಾವ ಕಾಲದ ಕಮ್ಯುನಿಕೇಷನ್ನೋ ಗೊತ್ತಿಲ್ಲ ಸ್ವಾಮಿ. ಹಳೆಯ ಟೆಲಿಫೋನ್‌ಗಳನ್ನು ಇಟ್ಟುಕೊಂಡು, ಇವರು ಫೋನ್ ಮಾಡಿ ಹೇಳುವ ಹೊತ್ತಿಗೆ, ಅವರೆಲ್ಲಾ ಮುಗಿಸಿಬಿಟ್ಟು ಹೋಗಿರುತ್ತಾರೆ. ಅದೆಲ್ಲಾ ಸ್ವಲ್ಪ ನೋಡಿ, ನೀವು ಸರಿಯಾದ ವ್ಯವಸ್ಥೆ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : (ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಇಡೀ ಸದನದ ಸದಸ್ಯರು ಈ ಉಗ್ರಗಾಮಿಗಳ ಭಯೋತ್ಪಾದಕರ ಮತಾಂಧರ ಈ ಹೇಡಿತನದ ಕೃತ್ಯಗಳ ಬಗ್ಗೆ ಆತಂಕಕ್ಕೆ ಒಳಗಾಗಿರುವುದು ನಿಜವಾಗಿಯೂ ಕೂಡ ಶ್ಲಾಘನೀಯ. ಮತ್ತೆ ಗೃಹ ಇಲಾಖೆ ಅಥವಾ ಸರ್ಕಾರ ಇದಕ್ಕೆ ಏನು ಪೂರ್ವಸಿದ್ಧತೆ ಮಾಡಿ ಕೊಂಡಿದೆ ಎನ್ನತಕ್ಕಂಥ ಮಾಹಿತಿಯನ್ನೂ ಕೂಡ ಕೊಡಬೇಕಾಗುತ್ತದೆ. ಮಾಹಿತಿಯಲ್ಲಿ ಕೆಲವು ರಹಸ್ಯ ಮಾಹಿತಿಗಳಾಗಿರುವುದರಿಂದ ಏನೂ ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎನ್ನುವ ಬಗ್ಗೆ ನಾನು ಬಹಳ ವಿವರವಾಗಿ ಹೇಳುವುದಕ್ಕೆ ಆಗುವುದಿಲ್ಲ. ಮತ್ತು ಉಳಿದಂತಹ ವಿಚಾರದಲ್ಲಿ ನಾನು ಕೆಲವು ಮಾಹಿತಿಗಳನ್ನು ಏಕೆಂದರೆ ನಿಮ್ಮ ದ್ವಾರದಿಂದ ಇಡೀ ಜನತೆಗೆ ನಾವು ತಿಳಿಸಬೇಕಾಗಿರುವುದರಿಂದ ಅದೂ ಕೂಡ ಇದೆ. ನಿನ್ನೆ ನಾವು ಉನ್ನತ ಅಧಿಕಾರಿಗಳು ಮತ್ತು ನಮ್ಮ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಂದ ಹಿಡಿದು ಕೆಲವು ಇಲಾಖೆಯ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಹಾಗೂ ಪೊಲೀಸ್ ಎಲ್ಲಾ ವರಿಷ್ಠ ಅಧಿಕಾರಿಗಳು ಮುಖ್ಯಮಂತ್ರಿಗಳು ಮತ್ತು ನಾನು ಒಂದು ಸಭೆಯನ್ನು ತೆಗೆದುಕೊಂಡಿದ್ದೆವು. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಸದನದಲ್ಲಿ ಇರಬೇಕಾಗಿದುದ್ದರಿಂದ ಅವರು ಇಲ್ಲಿ ಇದ್ದರು, ನಾವು ಸುಮಾರು ಎರಡು ತಾಸುಗಳವರೆಗೆ ಈ ವಿಚಾರದಲ್ಲಿ ಚರ್ಚೆಯನ್ನು ಮಾಡಿದ್ದೇವೆ. ಈಗಾಗಲೇ ನಿಮಗೆ ಗೊತ್ತಿದ್ದಂತೆ ಅದರಲ್ಲಿ ಕಾರ್ಪೊರೇಷನ್ ಆಯುಕ್ತರೂ ಸಹ ಭಾಗವಹಿಸಿದ್ದರು. ಜನತೆಯನ್ನು ಮೊದಲು ನಾವು ಅವರನ್ನು ಅರಿವಿನ ಹಾಗೆ ಮತ್ತು ಮಾಹಿತಿಗಳಿಗೆ ಒಳಪಡಿಸುವಂತಹ ಕೆಲಸ ಆಗಬೇಕು. We have to educate our masters ಅಂತ ಏನು ಕರೆಯುತ್ತಾರೆ, ನಮ್ಮ ಮಾಸ್ಟರ್‌ಗಳು ಅಂದರೆ ಜನಗಳೇ. ನಮ್ಮ ಪ್ರಭುಗಳು ಅವರು. ಅವರಿಗೂ ಕೂಡ ಇಂತಹ ಸಂದರ್ಭಗಳಲ್ಲಿ ತೀರಾ ಅವರು ಆತಂಕಕ್ಕೆ ಒಳಗಾಗತಕ್ಕಂಥಾದ್ದು. ಭಯಭೀತಿಗೆ ಒಳಗಾಗತಕ್ಕಂಥಾದ್ದು ಆಗಬಾರದು, ಇಂತಹ ಸನ್ನಿವೇಶಗಳು ಸೃಷ್ಟಿಯಾದಾಗ ತಮ್ಮನ್ನು ತಾವು ಯಾವ ರೀತಿಯಾಗಿ ನಡೆಸಿಕೊಳ್ಳಬೇಕು. ಮತ್ತು ಕೆಲವು ಅನಿವಾರ್ಯವಾಗಿ ಆಗುವಂತಹ ಸಣ್ಣಪುಟ್ಟ ವಿಳಂಬ ಅಥವಾ ಕಿರಿಕಿರಿ ಇವುಗಳನ್ನು ಸಹಿಸುವಂತಹ ಮನೋಸ್ಥಿತಿಯನ್ನು ನಮ್ಮ ಜನ ಅನುಸರಿಸಬೇಕಾಗುತ್ತದೆ. ಈಗಾಗಲೇ ನಾನು ಬರುವ ಮುಂದೆ ತಮಗೆ ಗೊತ್ತಿರ ಬಹುದು ನಾವು ವಿಧಾನ ಸೌಧದ ಒಳಗಡೆಗೆ ಯಾರನ್ನೂ ಬಿಡುವುದಿಲ್ಲ ಅಂತ ಪೊಲೀಸರು ಹೇಳುತ್ತಿದ್ದರೆ ಅಲ್ಲಿದ್ದಂತಹವರೆಲ್ಲಾ ಸ್ವಲ್ಪ ಪರಿಚಯ ಇದ್ದಂತಹವರು ಎಲ್ಲರೂ ಕೂಡ ನಮಗೆ ಬಹಳ ಮುಖ್ಯ ಕೆಲಸ ಇದೆ ಬಿಡಿಸಿ ಅಂತ ಹೇಳಿದರು. ಆಗ

ಇಲ್ಲಪ್ಪ 3 ಗಂಟೆಗೆ ನೀವು ಬರಬೇಕು ಪಾಸ್ ತೆಗೆದುಕೊಳ್ಳಬೇಕು ಅಂದರೆ ಅವರು ನಮ್ಮ ಮೇಲೆಯೇ ಗೊಣಗಿಕೊಂಡು ಸಿಟ್ಟಾಗಿ ಹೋದಂತಾದ್ದು ಇದೆ. ಇದೇ ರೀತಿ ಪ್ರತಿಯೊಂದು ದೊಡ್ಡ ದೊಡ್ಡ ಕಟ್ಟಡಗಳಲ್ಲಿ, ಅದರಲ್ಲೂ ಕೂಡ ವಿಧಾನಸೌಧ, ವಿಕಾಸ ಸೌಧ ನಮ್ಮ ಶ್ರೇಷ್ಠ ನ್ಯಾಯಾಲಯ ಜನತೆ ಸಾಂದ್ರತೆ ಇರುವಂತಹ ಆಸ್ಪತ್ರೆಗಳು, ರೈಲ್ವೆ ನಿಲ್ದಾಣ, ಬಸ್ಸು ನಿಲ್ದಾಣ, ವಿಮಾನ ನಿಲ್ದಾಣ, ಹಾಗೂ ದೊಡ್ಡದೊಡ್ಡ ಮಾಲ್‌ಗಳು ಈಗ ಒಂದು ಹೊಸ ಸಂಸ್ಕೃತಿ ಶುರುವಾಗಿದೆ. ಆ ಕಾರಣಕ್ಕಾಗಿ ವ್ಯಾಪಾರ ಮಳಿಗೆಗಳು ವಾಣಿಜ್ಯ ಮಳಿಗೆಗಳು ಇರತಕ್ಕಂಥ ಪ್ರದೇಶದಲ್ಲಿ ಈ ತರಹದ ಅಪಾಯವನ್ನು ಸೃಷ್ಟಿ ಮಾಡತಕ್ಕಂಥಾದ್ದು, ಭಯೋತ್ಪಾದಕರ ದೃಷ್ಟಿ ಇರತಕ್ಕಂಥಾದ್ದು ಕೂಡ ಅಷ್ಟೇ. ಅವರ ಉದ್ದೇಶ ಇರಕತಕ್ಕಂಥಾದ್ದು ಕೂಡ ಅಷ್ಟೇ. ಜನತೆಯಲ್ಲಿ ಭಯವನ್ನು ಭೀತಿಯನ್ನು ಉಂಟು ಮಾಡಿಸತಕ್ಕಂಥಾದ್ದು, ಅರಾಜಕತೆಯನ್ನು ಸೃಷ್ಟಿ ಮಾಡತಕ್ಕಂಥಾದ್ದು, ಯಾರೂ ಕಾನೂನಿನ ಪರಿಪಾಲನೆ ಇಲ್ಲವೇ ಇರುವ ರೀತಿಯಾಗಿ ಆ ಒಂದು ವಾತಾವರಣವನ್ನು ಸೃಷ್ಟಿ ಮಾಡಿ ಅದರ ಮೂಲಕವಾಗಿ ತಮ್ಮದೇ ಆಗಿರತಕ್ಕಂಥ ದುರುದ್ದೇಶಗಳನ್ನು ನೆರವೇರಿಸಿಕೊಳ್ಳಬೇಕು ಎನ್ನತಕ್ಕಂಥಾದ್ದು ಭಯೋತ್ಪಾದಕರ, ಮತಾಂದರ ಕೆಲವು ಕಾರ್ಯಕ್ರಮಗಳ ಪೈಕಿ ಅದೂ ಕೂಡ ಅಗ್ರವಾದಂತಹ ಆದ್ಯತೆಯ ಪಟ್ಟಿ. ಅದಕ್ಕಾಗಿ ನಾವು ಸರ್ಕಾರದವರು ಇಂತಿಂಥ ವಿಚಾರಗಳು ಬಂದಂತಹ ಸಂದರ್ಭದಲ್ಲಿ ಸಂಶಯಾಸ್ಪದವಾದಂತಹ ವ್ಯಕ್ತಿಗಳು ಕಂಡಾಗ ಅಥವಾ ಯಾವುದಾದರೂ ವಸ್ತುವನ್ನು ರಸ್ತೆಯಲ್ಲಿ, ರೈಲಿನಲ್ಲಿ ಕಂಡಂತಹ ಸಂದರ್ಭದಲ್ಲಿ ನೀವು ಅವುಗಳನ್ನು ತಿಳಿಸತಕ್ಕಂಥಾದ್ದು ಆಗಬೇಕು. ಯಾರು ಕಾನೂನಿಗೆ ಅನುಗುಣವಾಗಿ ಪೊಲೀಸರು ನಿಮ್ಮ ಪರವಾಗಿ ನಿಂತುಕೊಂಡು ಕೆಲವು ಸಲ ಸಾಲಾಗಿ ನಿಲ್ಲಬೇಕು ನಿಮ್ಮ ವಸ್ತುಗಳನ್ನು ಪರೀಕ್ಷೆಗೆ ಗುರಿಪಡಿಸಬೇಕು ಅಂದಾಗ ಸಹಕರಿಸಬೇಕು, ಇಂತಹ ವಿಚಾರಗಳ ಬಗ್ಗೆ ಒಂದು ಆಂಧೋಲನವನ್ನು ಮಾಡುವಂತಹ ರೀತಿಯಲ್ಲಿ ಕೈಗೆ ತೆಗೆದುಕೊಳ್ಳಬೇಕು ಎನ್ನುವಂತಹ ಒಂದು ನಿರ್ಧಾರವನ್ನು ಮಾಡಿದ್ದೇವೆ. ಅದೇ ರೀತಿಯಾಗಿ ಅಧಿಕಾರಿಗಳ ಮಟ್ಟದಲ್ಲಿ ಈ ನಮ್ಮ ಮಾಹಿತಿ ತಂತ್ರಜ್ಞಾನದ ಎಲ್ಲಾ ಉದ್ದಿಮೆಗಳು ಒಂದೇ ಕಡೆ ಇರತಕ್ಕಂಥಾದ್ದು ಇದೆ. ತಮ್ಮ ಹೈಟೆಕ್ ಸಿಟಿ ಎನ್ನತಕ್ಕಂಥಾದ್ದರಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಉದ್ದಿಮೆಪತಿಗಳು ಮತ್ತು ಅಲ್ಲಿ ಜನತೆ ಅಲ್ಲಿಯೇ ವಾಸ ಮಾಡತಕ್ಕಂಥಾದ್ದು ಇದೆ: ಅವರ ಜೊತೆಗೆ ಮಾಲ್ ನಡೆಸತಕ್ಕಂಥವರು ಇಲ್ಲಿ ಒಂದು 3–4 ಆ ತರಹದ ಬಹಳ ಬೃಹದಾಕಾರವಾಗಿರತಕ್ಕಂಥ ವ್ಯಾಪಾರ ಮಳಿಗೆಗಳಿವೆ. ಅದು ಫೋರಂ ಆಗಿರಬಹುದು ಅಥವಾ ಸ್ಟಾಪರ್ ಸ್ಟಾಪ್ ಆಗಿರಬಹುದು, ಅಥವಾ ನಮ್ಮ ಮೆಟ್ರೋಗಳು ಆಗಿರಬಹುದು ಈ ತರಹದ ದೊಡ್ಡ ದೊಡ್ಡ ಮಾಲ್‌ಗಳ

ಮಾಲೀಕರುಗಳನ್ನು ಕರೆಸಿ ಅಧಿಕಾರಿಗಳು ಮಟ್ಟದಲ್ಲಿ ಅವರು ಯಾವ ತರಹದ ಕ್ರಮ ಕೈಗೊಳ್ಳಬೇಕು. ಯಾವ ಉಪಕರಣಗಳನ್ನು ಅವರು ಅಳವಡಿಸಬೇಕು ಕ್ಯಾಮರಾ ಮೊದಲಾಗಿರತಕ್ಕಂಥಾದ್ದು ಮತ್ತು ಆ ತರಹದಲ್ಲಿ ಇರತಕ್ಕಂಥ ಅನೇಕ ವಿಷಯಗಳ ಬಗ್ಗೆಯೂ ಕೂಡ ಅವರು ಅವರ ಜೊತೆಗೆ ಚರ್ಚೆ ಮಾಡಿದ್ದಾರೆ. ನಾಳೆ ಎರಡು ದಿವಸಗಳ ಒಳಗಾಗಿಯೇ ನಮ್ಮ ಅಧಿಕಾರಿಗಳು ಅವರ ಜೊತೆಗೆ ಮಾತನಾಡುವಂಥಾದ್ದು ಮತ್ತು ಅವರ ಬೇಡಿಕೆಗಳು ಮತ್ತು ನಾವು ಯಾವ ರೀತಿ ಅವರಿಗೆ ಸಹಕಾರಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದರ ಬಗ್ಗೆ ಒಂದು ವಿವರವಾದ ವರದಿಯನ್ನು ಕೊಟ್ಟ ಮೇಲೆ ನಾಳೆ ನಾಳಿದ್ದರ ಒಳಗಾಗಿಯೇ ಮತ್ತು ಮುಖ್ಯಮಂತ್ರಿಗಳು, ಉಪ ಮುಖ್ಯ ಮಂತ್ರಿಗಳು ನಾನು ಎಲ್ಲಾ ಹಿರಿಯ ವರಿಷ್ಟ ಅಧಿಕಾರಿಗಳನ್ನು ಕರೆಸಿ ಅವರ ಜೊತೆಗೂ ಚರ್ಚೆ ಮಾಡಿ ಸಹಕಾರವನ್ನು ಅವರ ಕಡೆಯಿಂದಲೂ ಕೂಡ ತೆಗೆದುಕೊಳ್ಳಬೇಕು ಎನ್ನತಕ್ಕಂಥ ಎರಡನೇ ನಿರ್ಧಾರವನ್ನು ನಾವು ಮಾಡಿದ್ದೇವೆ. ಮೂರನೇ ನಿರ್ಧಾರ ನಮ್ಮ ಸರ್ಕಾರದ ಗೃಹ ಇಲಾಖೆಯಿಂದ ಬಂದಿರತಕ್ಕಂಥ ಅನೇಕ ಪ್ರಸ್ತಾವಗಳು ಇವೆ. ಅದರಲ್ಲಿ ಬಹಳ ಮುಖ್ಯವಾಗಿರತಕ್ಕಂಥ ಪ್ರಸ್ತಾವನೆಗಳಲ್ಲಿ ಕೆಲವು ಸಂದರ್ಭಗಳಲ್ಲಿ ವಾಹನಗಳನ್ನು ಕೊಟ್ಟಿದ್ದಾರೆ ಆದರೆ ಮೆಕ್ಯಾನಿಕ್ಸ್ ಮತ್ತು ಡ್ರೈವರ್ಸ್ ನೇಮಕಾತಿಗಳನ್ನು ಮಾಡಲಿಕ್ಕೆ ಅನುಕೂಲಗಳು ಆಗಿಲ್ಲ ಮತ್ತು ವರದಿ ಬಂದಿಲ್ಲ. ಆ ತರಹದ ವಿಚಾರಗಳು ಬಂದಾಗ ಹಣಕಾಸಿನ ಇಲಾಖೆಯ ಆರ್ಥಿಕ ಕಾರ್ಯದರ್ಶಿಗಳೂ ಕೂಡ ಬಂದಿದ್ದರು. ಅವರೂ ಕೂಡ ಹೇಳಿದರು ನಾವು ಇದಕ್ಕೆ ಸಂಪೂರ್ಣವಾದ ಸಹಕಾರವನ್ನು ಕೊಡುತ್ತೇವೆ ಇಂತಹ ಸನ್ನಿವೇಶದಲ್ಲಿ ನಾವು ಹಿಂದೆ ಬೀಳುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದರಿಂದ ಸಿಬ್ಬಂದಿಯ ನೇಮಕಾತಿ, ವಾಹನಗಳು ಮತ್ತು ಅತ್ಯಾಧುನಿಕವಾಗಿರತಕ್ಕಂಥ ಉಪಕರಣಗಳನ್ನು ಮತ್ತು ತಾವು ಹೇಳಿದಂತೆ ನಮ್ಮ ಬಂದೂಕುಗಳು ಆಗಬಹುದು ಆಯುಧಗಳು ಆಗಬಹುದು ಶಸ್ತ್ರಾಸ್ತ್ರಗಳು ಆಗಬಹುದು ರಾಜೇಂದ್ರನ್‌ರವರು ಹೇಳಿದಂತೆ ಅವು ಟಿಪ್ಪು ಸುಲ್ತಾನ್ ಕಾಲದ್ದು ಅಲ್ಲ ಅವು ಇನ್ನೂ ನಮ್ಮ ಪೊಲೀಸ್ ಸ್ಟೇಷನ್‌ನಲ್ಲಿ ಪಾಯಿಂಟ್ 303 ವೆಪನ್ಸ್ ಇವೆ. ಆದರೆ ಅವುಗಳನ್ನು ಬದಲಿ ಮಾಡುವಂತಾದ್ದಕ್ಕೆ ಕೂಡ ಕೇಂದ್ರ ಸರ್ಕಾರವನ್ನು ಉತ್ತಮವಾದಂತಹ ನೆರವನ್ನು ಕೊಟ್ಟಿದ್ದಾರೆ, ಹಿಂದೆ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಅವರು ಗೃಹ ಖಾತೆಯನ್ನು ಹೊಂದಿದಂತಹವರು ಆಗಿದ್ದರು. ಆಗ 10 ಕೋಟಿ ರೂಪಾಯಿ ಬಿಡುಗಡೆಯಾಗಿದ್ದರಲ್ಲಿ ಸುಮಾರು 7 ಕೋಟಿ ರೂಪಾಯಿಗಳನ್ನು ಬೇರೆ ಬೇರೆ ಇದಕ್ಕೆ ಖರ್ಚು ಮಾಡಿದ್ದೇವೆ. ಮತ್ತು 3 ಕೋಟಿ ರೂಪಾಯಿಗಳನ್ನು ಇದೇ ರೀತಿಯಾದಂತಹ ವಾಹನಗಳು ತೆಗೆದುಕೊಳ್ಳತಕ್ಕಂಥಾದ್ದಕ್ಕೆ

ಖರ್ಚು ಮಾಡಲಾಗಿದೆ. ಮೊನ್ನೆ ತಾನೇ ನಾವು ಬೆಂಗಳೂರು ನಗರದಲ್ಲಿ ಪೊಲೀಸ್ ಆಯುಕ್ತರಿಗೆ 300 ಮೋಟಾರ್ ಸೈಕಲ್‌ಗಳನ್ನು 35 ಜೀಪ್‌ಗಳನ್ನೂ ಕೂಡ ನಾವು ಕೊಟ್ಟಿದ್ದೇವೆ. ಆದರೆ ಇದರಿಂದಲೇ ನಾವು ಭಯೋತ್ಪಾದಕರನ್ನು ನಿಲ್ಲಿಸುತ್ತೇವೆ ಎನ್ನತಕ್ಕಂಥ ಮಾತಲ್ಲ. ಅನೇಕ ಲೋಪದೋಷಗಳೂ ಕೂಡ ಆಗಿರಬಹುದು, ಆ ವಿಚಾರವನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಕೇಂದ್ರ ಸರ್ಕಾರದಿಂದ ಮಾನ್ಯ ಶ್ರೀರಾಮರೆಡ್ಡಿಯವರು ಕೇಳಿದಂತೆ ಮುಖ್ಯಮಂತ್ರಿಗಳಿಗೆ ದೂರವಾಣಿಯ ಮೂಲಕ ಮಾತನಾಡಿದ್ದಾರೆ. ಹಿಂದೆ ಕಾರ್ಯದರ್ಶಿಗಳ ಮಟ್ಟದಲ್ಲಿ ಐಜಿ ಡಿಜಿಗಳ ಮಟ್ಟದಲ್ಲಿ ಬರೆದಿರತಕ್ಕಂಥ ಪತ್ರಗಳು ಇವೆ. ಅದರಲ್ಲಿ ಏನೆಲ್ಲಾ ಕ್ರಮಗಳು ಕೈಗೊಳ್ಳಬೇಕು ಅಂತ ವಿವರ ಏನು ಕೊಟ್ಟಿದ್ದಾರೆ, ಮಾಹಿತಿ ಕೊಟ್ಟಿದ್ದಾರೆ ಅದನ್ನು ಈ ಸಮಯದಲ್ಲಿ ಬಹಿರಂಗಪಡಿಸತಕ್ಕಂಥಾದ್ದು ಅಷ್ಟು ಸಾಧುವಾದುದು ಅಲ್ಲ ಅಂತ ಹೇಳಿ ಆ ವಿವರ ಹೇಳುವುದಿಲ್ಲ ಆದರೆ ಎಲ್ಲಾ ತರಹದ ನೆರವನ್ನು ಕೊಡುತ್ತೇವೆ ನೀವು ಆ ಪ್ರಕಾರ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಈ ವಿಚಾರದಲ್ಲಿ ಕೇಂದ್ರ ಸರ್ಕಾರ ತನ್ನ ಮಾಹಿತಿಯನ್ನು ಕೊಟ್ಟಿದ್ದೇವೆ ಅದರ ಪ್ರಕಾರ ನೀವು ಸನ್ನದ್ಧರಾಗಿಬೇಕು, ಕಟ್ಟೆಚ್ಚರವನ್ನು ಇಡೀ ರಾಜ್ಯದ ತುಂಬಾ ಕೊಡಬೇಕು ಎನ್ನತಕ್ಕಂಥ ಮಾಹಿತಿಯನ್ನು ಕೊಟ್ಟಿದ್ದಾರೆ, ಅದನ್ನೂ ಕೂಡ ನಾವು ನಿರ್ಧಾರ ಮಾಡಿದ್ದೇವೆ ಈಗ ಇಲ್ಲಿ ಏನು ಸ್ಫೋಟಕ ಆಗಿದೆ ಮತ್ತು ಬಹಳ ಕಡೆಗೆ ಸ್ಫೋಟಕ ಆಗಿರತಕ್ಕಂಥಾದ್ದು ಏನಿದೆ ಬಹಳ ದೊಡ್ಡ ಪ್ರಮಾಣದಲ್ಲಿ ಆರ್ ಡಿ ಎಕ್ಸ್ ಬರುತ್ತಿದೆ. ಈ ಆರ್ ಡಿ ಎಕ್ಸ್ ಬರತಕ್ಕಂಥಾದ್ದು ವಿಮಾನ ಮತ್ತು ದಾರಿಯ ಮಾರ್ಗಕ್ಕಿಂತಲೂ ಹೆಚ್ಚಾಗಿ ಕಡಲು ತೀರದ ಹಡಗುಗಳ ಮೂಲಕ ಬರತಕ್ಕಂಥಾದ್ದರ ಬಗ್ಗೆ ನಮ್ಮ ಹತ್ತಿರ ಮಾಹಿತಿ ಇದೆ. ಆದ್ದರಿಂದ ಕೋಸ್ಟಲ್ ಗಾರ್ಡ್ ಅಂತ ಹೇಳಿ ನಮ್ಮಲ್ಲಿ ಏನು ಮಾಡಿದ್ದಾರೆ ಅದನ್ನು ಬಲಪಡಿಸಬೇಕಾಗಿರತಕ್ಕಂಥಾದ್ದು ಬಹಳ ಅಗತ್ಯವಿದೆ. ಯಾವುದೋ ಒಂದು ಕಡೆಗೆ ಚಿಕ್ಕಪುಟ್ಟ ದೋಣಿಗಳಲ್ಲಿ ಬಂದು ನಿರ್ಜನ ಪ್ರದೇಶಗಳಲ್ಲಿ ಅವುಗಳನ್ನೆಲ್ಲಾ ಹಾಕಿ ಹೋಗತಕ್ಕಂಥಾದ್ದು ಈಗ ಹಿಂದೆ ಬಂಗಾರ ಮತ್ತು ಬೆಳ್ಳಿಯ ಬಗ್ಗೆ ಆ ತರಹದ ಏನು ಕಳ್ಳ ಸಾಗಾಣಿಕೆ ನಡೆಯುತ್ತಿತ್ತು ಅದೇ ಜನ ಈಗ ಕಳ್ಳ ಸಾಗಾಣಿಕೆ ಕಡೆಗೆ ಈ ಬಂಗಾರದ ವಿಷಯದಲ್ಲಿ ಮತ್ತು ಬೆಳ್ಳಿ ವಿಷಯದಲ್ಲಿ ಅಂತರರಾಜ್ಯದ ಮಾರುಕಟ್ಟೆಗಳಲ್ಲಿ ಮತ್ತು ನಮ್ಮಲ್ಲಿ ಆಗಿರುವಂತಹ ಉದಾರೀಕರಣದ ಹಿನ್ನಲೆಯಲ್ಲಿ ಆ ಕಳ್ಳಸಾಗಾಣಿಕೆ ಲಾಭದಾಯಕ ಅಲ್ಲ ಅಂತ ಹೇಳಿ ಅವರು ಇಂತಾದ್ದರ ಕಡೆಗೆ ಮನಸ್ಸು ಕೊಟ್ಟು ಶಸ್ತ್ರಗಳನ್ನು ತರತಕ್ಕಂಥಾದ್ದು ಅದೇ ರೀತಿಯಾಗಿ ಆರ್‌ಡಿ ಎಕ್ಸ್‌ನ್ನು ತಂದು ಮಾರಾಟ ಮಾಡತಕ್ಕಂಥಾದ್ದು ಕೂಡ ನಡೆದಿದೆ. ಅದರ ಬಗ್ಗೆಯೂ ಕೂಡ ಕಟ್ಟೆಚ್ಚರವನ್ನು ವಹಿಸಬೇಕು ಅಂತ ನಾವು ನಿರ್ಧಾರ ಮಾಡಿದ್ದೇವೆ. ಈಗಾಗಲೇ

ನಮ್ಮಲ್ಲಿ ಸಿಬ್ಬಂದಿಯ ಕೊರತೆ ಬಹಳ ಇದೆ. ಈ ಸಿಬ್ಬಂದಿ ಕೊರತೆಗೆ ಪ್ರಸ್ತಾವ ನಮ್ಮ ರಾಜ್ಯ ಸರ್ಕಾರದ ಮುಂದೆ ಇದೆ ಅದಕ್ಕೆ ಒಪ್ಪಿಗೆ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. 2100 ರಷ್ಟು ಪೊಲೀಸ್ ಸಿಬ್ಬಂದಿಯನ್ನು ನೇಮಕಾತಿ ಮಾಡತಕ್ಕಂಥಾದ್ದು, ತರಬೇತಿ ಮಾಡತಕ್ಕಂಥಾದ್ದು ತರಬೇತಿ ಮಾಡತಕ್ಕಂಥಾದ್ದು ಮತ್ತು ಇಂತಹ ಸನ್ನಿವೇಶಗಳು ಬಂದಾಗ ಸ್ಫೋಟಕ ವಸ್ತುಗಳ ಪತ್ತೆ ಮತ್ತು ಅದನ್ನು ನಿಷ್ಕ್ರಿಯೆಗೊಳಿಸತಕ್ಕಂಥಾದ್ದು ಹಾಗೆಯೇ ಅವುಗಳ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿರುವಂತಹ ಹಿನ್ನೆಲೆಯಲ್ಲಿ ಜಾಗ್ರತವಾಗುವಂತಹ ಒಂದು ಶಸ್ತ್ರಾಸ್ತ್ರದ ಸಿದ್ಧತೆ ಇರತಕ್ಕಂಥ ಒಂದು ಪಡೆಗಳನ್ನು ನಿರ್ಮಾಣ ಮಾಡತಕ್ಕಂಥಾದ್ದು; ಈಗಾಗಲೇ ಇದ್ದಾರೆ ಆ ಪ್ಲಾಟೂನ್ಸ್‌ಗಳೆಲ್ಲಾ ಇವೆ. ಅದೇ ರೀತಿಯಾಗಿ ಮಾಡಬೇಕು ಎನ್ನತಕ್ಕಂಥ ಒಂದು ಕ್ರಮವನ್ನು ಕೈಗೊಂಡಿದ್ದೇವೆ. ನಮಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಅದಂತಹ ಒಂದು ಘಟನೆಯ ಹಿನ್ನೆಲೆಯಲ್ಲಿ ನಮ್ಮ ತಪ್ಪುಗಳು ಎಲ್ಲಿವೆ ನಮ್ಮ ದೋಷಗಳು ಎಲ್ಲಿವೆ ಎನ್ನುವುದು ಗೊತ್ತಾಗಿದೆ. ಅವುಗಳನ್ನು ಸರಿಪಡಿಸತಕ್ಕಂಥ ಕೆಲಸಗಳನ್ನೂ ಕೂಡ ಮಾಡುತ್ತಿದ್ದೇವೆ. ಆ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದ ಪೊಲೀಸರು ಬಹಳ ಕಡೆಗೆ ಹೋಗಿ ವಿವರಗಳನ್ನು ಕಲೆಹಾಕಿದ್ದಾರೆ ಮತ್ತು ಇಂತಾದ್ದರ ಬಗ್ಗೆ ಕ್ರಮ ಕೈಗೊಳ್ಳತಕ್ಕಂಥಾದ್ದು ಆಗಿದೆ. ಆದರೆ ಒಂದು ಮಾತನ್ನು ಈ ಸನ್ನಿವೇಶದಲ್ಲಿ ಯಾರೂ ಅನ್ಯತಾ ಭಾವಿಸಬಾರದು ಯಾವುದೇ ತರಹವಾಗಿ ನೂರಕ್ಕೆ ನೂರರಷ್ಟು ಭದ್ರತೆಯನ್ನು ನಾವು ಒದಗಿಸಿ ಕೊಡುತ್ತೇವೆಂದು ಹೇಳಿ ಯಾವ ನಾಗರೀಕ ಸರ್ಕಾರವೂ ಕೂಡ ಭದ್ರತೆ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ನಾವು ಯಾವ ನಿಯಮಾವಳಿಗಳನ್ನು ರಚಿಸಿರುತ್ತೇವೆ ಯಾವ ವ್ಯೂಹವನ್ನು ರಚನೆ ಮಾಡಿಕೊಂಡಿರುತ್ತೇವೆ ಅದರೊಳಗೆ ನುಸುಳುವಂತಹ ರೀತಿಯಲ್ಲಿ ಇತ್ತೀಚಿನ ಶ್ರೀಮಂತರು, ಬಹಳ ವಿದ್ಯಾವಂತರಾಗಿರತಕ್ಕಂಥವರು ವೈಜ್ಞಾನಿಕವಾಗಿ ಇರುವಂತಹ ಉಪಕರಣಗಳನ್ನು ಉಪಯೋಗಿಸಿಕೊಂಡು ಅಂತಹ ದಾಂಧೆಯನ್ನು ಮಾಡುತ್ತಾರೆ. ಆದರೆ ಈ ಸದನದ ಮೂಲಕ ಮಾನ್ಯ ಎಲ್ಲಾ ಶಾಸಕರುಗಳಲ್ಲಿ ನಾನು ವಿನಂತಿ ಮಾಡಿಕೊಳ್ಳತಕ್ಕಂಥಾದ್ದು ಇಷ್ಟೇ. ಸರ್ಕಾರ ಸಂಪೂರ್ಣವಾಗಿ ಸನ್ನದ್ಧತೆಯನ್ನು ಮಾಡಿಕೊಂಡಿದೆ. ಅದಕ್ಕೆ ಯಾವುದೇ ರೀತಿಯ ಕಾನೂನಿನ ಅಥವಾ ಹಣಕಾಸಿನ ಅಡಚಣೆ ಇಲ್ಲದಂತಹ ರೀತಿ ಕ್ರಮ ಕೈಗೊಳ್ಳುತ್ತೇವೆ, ಅದಕ್ಕೆ ಎಲ್ಲರೂ ಕೂಡ ಸಹಕರಿಸಬೇಕಾಗಿದೆ. ಶಾಸಕರಭವನ, ರಾಜಭವನ ವಿಧಾನಸೌಧ, ವಿಧಾನಪರಿಷತ್ತು, ಹೈಕೋರ್ಟು, ಆಸ್ಪತ್ರೆಗಳು ಇವುಗಳ ಕಡೆ ರಕ್ಷಣೆ ಕೊಡಬೇಕಾಗಿದ್ದರೆ, ತಾವು ಶಾಸಕರು ಶಾಸಕರಭವನದಲ್ಲಿ ನಾವೇನಾದರೂ ನಿರ್ಣಯ ಕೈಗೊಂಡು ಪ್ರತಿಬಂಧ ತಂದರೆ ಶಾಸಕರು ಸಂಪೂರ್ಣವಾಗಿ ಸಹಕಾರ

ಕೊಡಬೇಕು. ಅವರು ಬೀಗಗಳನ್ನು ಅನಧಿಕೃತ ವ್ಯಕ್ತಿಗಳ ಕೈಗೆ ಕೊಡಬಾರದು. ಶಾಸಕರಿಗಿಂತ ಹೆಚ್ಚಾಗಿ ಶಾಸಕರಲ್ಲದ ಮೂರರಷ್ಟು ಜನ ಬೇರೆಯವರೆಲ್ಲಾ ಬಂದು ಅಲ್ಲಿ ವಾಸ ಮಾಡುವುದು ಇದೆ. ಮತ್ತು ರಾತ್ರಿ ಹೊತ್ತಿನಲ್ಲಿ ಆ ವೇಳೆಗಳಲ್ಲಿ ಬಂದುಹೋಗುವವರು ಇದ್ದಾರೆ. ಅಲ್ಲಿಯ ಕಾವಲು ಪಡೆ ಜತೆ ಅವರು ವಿಶ್ವಾಸ ಗಳಿಸಿಕೊಂಡಿರುತ್ತಾರೆ ಇಲ್ಲದಿದ್ದರೆ ಅವರನ್ನು ಬೆದರಿಸಿಹೋಗುವುದೂ ಇದೆ. ಈ ಎಲ್ಲಾ ಕಾರಣಗಳಿರುವುದರಿಂದ ಶಾಸಕರು ಸಹಾಯ ಮಾಡಬೇಕು. ನಾನೂ ಕೂಡ ಒಬ್ಬ ಶಾಸಕನಾಗಿರುವುದರಿಂದ ಶಾಸಕರ ಕಷ್ಟ ಏನು ಅಂತ ಗೊತ್ತಾಗುತ್ತದೆ. ನಮ್ಮ ಹಿಂದೇನೇ 8–10 ಜನ ಬರುತ್ತಾರೆ. ನಾವೇ ಸಚಿವರಿಗೆ ಈ ವಿಷಯ ತಿಳಿಸುತ್ತೇವೆ ಅಂದರೆ ಅವರು ನಮ್ಮನ್ನು ನಂಬುವುದಿಲ್ಲ ಅಂತ ನಾವೇ ಭಾವಿಸಿಕೊಂಡು ಬನ್ನಿ ನಿಮ್ಮನ್ನೆಲ್ಲಾ ಕರೆದುಕೊಂಡು ಹೋಗಿಬಿಡುತ್ತೇನೆ ಅಂತಹೇಳಿ ಅವರೆಲ್ಲಾ ಬರುತ್ತಾರೆ. ಕಾರಿಡಾರ್‌ಗಳಲ್ಲಿ ಅನಧಿಕೃತವಾಗಿ ಎಷ್ಟು ಜನ ಇರುತ್ತಾರೆ ನೋಡಬಹುದು. ಶಾಸಕರ ಅಥವಾ ಸಚಿವರ ಮಿತ್ರರೇ ಆಗಿರಲಿ ಅವರು ಶಾಂತಿಯಿಂದ ಕೆಲಸ ಮಾಡುವ ವಾತಾವರಣ ಇಲ್ಲಿ ಸೃಷ್ಟಿಯಾಗಿಲ್ಲ. ದೆಹಲಿಯಲ್ಲಿ ವ್ಯವಸ್ಥೆ ಬಹಳ ಚೆನ್ನಾಗಿದೆ. ಮಧ್ಯಾಹ್ನದ ನಿಗದಿತ ಸಮಯ ಒಂದು ಬಿಟ್ಟರೆ ಬೇರೆ ಸಂದರ್ಭಗಳಲ್ಲಿ ಒಳಗೆ ಬಿಡಲು ಕಟ್ಟುನಿಟ್ಟಿನ ಕ್ರಮಗಳಿವೆ. ಇಲ್ಲಿ ಅದೇ ರೀತಿಯ ಕ್ರಮಗಳನ್ನು ನಾವು ಕೈಗೊಳ್ಳಬೇಕು. ಅದಕ್ಕೆ ಅನೇಕ ಸಂದರ್ಭದಲ್ಲಿ ಆಕ್ಷೇಪಣೆ ಬಂದಿರುವುದು ಇದೆ. ನಮ್ಮ ಉದ್ಯೋಗಿಗಳಿಗೆಂದು ಪಂಚಿಂಗ್ ವ್ಯವಸ್ಥೆ ತಂದಿದ್ದೆವು. ಅದರಿಂದ ಅವರು ಯಾವ ಸಮಯಕ್ಕೆ ಬಂದರು ಯಾವ ಸಮಯಕ್ಕೆ ಹೋದರು ಎಂಬುದು ಗೊತ್ತಾಗುತ್ತದೆ. ಆಡಳಿತದಲ್ಲಿ ಬಿಗಿ ಬರುತ್ತದೆ. ನಮಗೂ ಗುರುತಿನ ಚೀಟಿ ಕೊಟ್ಟಿದ್ದರು, ಈಗಲೂ ಬಹಳ ಅಧಿಕಾರಿಗಳು ಹಾಕಿಕೊಳ್ಳುತ್ತಾರೆ, ಮಂತ್ರಿಗಳು ಶಾಸಕರು ನಾವು ಹಾಕಿಕೊಳ್ಳುವುದಿಲ್ಲ. ಯಾರಾದರೂ ಹೊಸಬೇದೆ ನಮ್ಮ ಮುಖ ಗೊತ್ತಿಲ್ಲ ದವನು ನಿಲ್ಲಿಸಿದರೆ ಅದು ನಮಗೆ ಅಪಮಾನ ಅಂತ ನಾವು ಭಾವಿಸಿಕೊಳ್ಳುತ್ತೇವೆ. ಅವನ ಕರ್ತವ್ಯ ಅವನು ಮಾಡುತ್ತಿದ್ದಾನೆ. ಆಯ್ತು, ನಾನು ಮಂತ್ರಿ, ನಾನು ಶಾಸಕ, ನಾನು ಇಂತಹ ಅಧ್ಯಕ್ಷ ಅಂತ ಹೇಳಿಕೊಂಡರೆ ಅದು ಅಪಮಾನವಲ್ಲ. ಹೀಗ ಚಿಕ್ಕಪುಟ್ಟ ವಿಷಯಗಳಿಗೆ ತಾಳ್ಮೆ ಕಳೆದುಕೊಳ್ಳುವ ಪ್ರವೃತ್ತಿ ನಮ್ಮ ಜನರಲ್ಲಿ ಕೂಡ ಇದೆ. ಅವರ ಸಂರಕ್ಷಣೆ ದೃಷ್ಟಿಯಿಂದ ಸಂಪೂರ್ಣ ಸಹಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಆ) ವಿಷಯ : ಮಂಗಳೂರು ನಗರ ಪಾಲಿಕೆಯಲ್ಲಿ ಮಹಿಳೆಯರಿಗೆ ಮೇಯರ್ ಹುದ್ದೆ ಕಾಯ್ದಿರಿಸುವ ಬಗ್ಗೆ.